**ಪಿ.ಡಬ್ಲ್ಯೂ-1**

ದಿನಾಂಕಃ **24-06-2023** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಶ್ರೀಮತಿ ವಿ.ಬಿ. ವಕೀಲರಿಂದಃ-

ಈ ಕೇಸು ಹಾಕುವ ಪೂರ್ವದಲ್ಲಿ ನಾನು ಪ್ರತಿವಾದಿಯ ಬಳಿ ನನ್ನ ಹಣ ನನಗೆ ಮರಳಿ ಕೊಡಿ ಎಂದು ಭೇಟಿಯಾಗಿ ಕೇಳಿಲ್ಲ ಫೋನ್ ಮುಖಾಂತರ ಕೇಳಿದ್ದೇನೆ. ನನಗೆ ಆ ಸಮಯದಲ್ಲಿ ಇದ್ದ ನನ್ನ ಮೊಬೈಲ್ ನಂಬರ್ ನೆನಪಿಲ್ಲ. 9844584051 ನನ್ನ ಮೊಬೈಲ್ ನಂಬರ್ ಆಗಿತ್ತೋ ಇಲ್ಲವೋ ಎಂದು ನನಗೆ ಗೊತ್ತಾಗುವುದಿಲ್ಲ. ನನಗೆ ನನ್ನ ಈಗಿನ ಮೊಬೈಲ್ ನಂಬರ್ ನೋಡದೇ ಹೇಳಲು ಆಗುವುದಿಲ್ಲ. ನಾನು ಪ್ರತಿವಾದಿಗೆ ಫೋನ್ ಮುಖಾಂತರ ಕರೆ ಮಾಡಿದಾಗ ನನ್ನೊಡನೆ ಬೇರೆ ಯಾರು ಇರಲಿಲ್ಲ. ಪ್ರತಿವಾದಿಯ ಗಂಡನು ಎಂದೂ ಕೂಡ ನನಗೆ ಕರೆಮಾಡಿಲ್ಲ. ನನಗೆ ಸವಿತಾ ನಂಬರ್ ಹೇಳಲು ಆಗುವುದಿಲ್ಲ. ನನಗೆ ಫೋನ್ ಕಾಲ್ ರಿಸೀವ್ ಮಾಡಲು ಗೊತ್ತಿರುತ್ತದೆ ಹಾಗೂ ನನ್ನ ಬಳಿ ಇರುವ ನಂಬರ್ ಗೆ ಫೋನ್ ಮಾಡಲು ಗೊತ್ತಿರುತ್ತದೆ. ದಾವಾ 2 ತಿಂಗಳ ಪೂರ್ವದಲ್ಲಿ ಪ್ರತಿವಾದಿಯ ಯಜಮಾನ ರವಿಶಂಕರ್ ನನಗೆ ಕರೆ ಮಾಡಿದ್ದರು ಎನ್ನುವುದು ಸರಿಯಲ್ಲ. ರವಿಶಂಕರ್ ಇವರು ನನಗೆ ಕರೆ ಮಾಡಿ ನಾನು ಆತನ ಅತ್ತೆ ಜಯಮ್ಮ ಇವರೊಡನೆ ಏನು ವ್ಯವಹಾರ ಆಗಿತ್ತು ಎಂದು ಕೇಳಿದ ಹಾಗೂ ನನ್ನೊಡನೆ ಮಾತನಾಡಬೇಕು ಎಂದು ಕರೆದ ಎನ್ನುವುದು ಸುಳ್ಳು. ಆಗ ನಾನು ರವಿಶಂಕರನಿಗೆ ಆತನ ಅತ್ತೆ ನನ್ನ ಬಳಿ 2 ಲಕ್ಷ ರೂ.ಗಳನು ಪಡೆದುಕೊಂಡಿರುವ ಬಗ್ಗೆ ಹಾಗೂ ಚೀಟಿ ಹಣ ಕೂಡ ಸರಿಯಾಗಿ ಕಟ್ಟದೇ ಇರುವ ಬಗ್ಗೆ ತಿಳಿಸಿದೆ ಎನ್ನುವುದು ಸುಳ್ಳು. ನಾನು ಯಾವುದೇ ಚೀಟಿ ವ್ಯವಹಾರ ಮಾಡುವುದಿಲ್ಲ. ರವಿಶಂಕರ್ ಈತನು ಜಯಮ್ಮ ನನಗೆ 2 ಲಕ್ಷ ರೂ.ಗಳನ್ನು ಈಗಾಗಲೇ ಕೊಟ್ಟಿದ್ದಾರೆ ಈ ಬಗ್ಗೆ ಮಾತನಾಡೋಣ ಬನ್ನಿ ಎಂದು ಕರೆದರೂ ಎನ್ನುವುದು ಸುಳ್ಳು. ಆಗ ನಾನು ರವಿಶಂಕರನಿಗೆ ಜಯಮ್ಮ ಚೀಟಿ ಹಣವನ್ನು ಕೊಟ್ಟಿಲ್ಲ ಆಕೆ ನನಗೆ ಅಸಲು 5 ಲಕ್ಷ ರೂ.ಗಳನ್ನು ಕೊಡಬೇಕು ಹಾಗೂ ಅವರು ಸಹಿ ಮಾಡಿರುವ 2 ಚೆಕ್ ಗಳು ಹಾಗೂ ಖಾಲಿ ಪ್ರನೋಟ್ ಗಳು ಇರುವ ಬಗ್ಗೆ ಆತನಿಗೆ ತಿಳಿಸಿದೆ ಎನ್ನುವುದು ಸುಳ್ಳು. ಆಗ ರವಿಶಂಕರನು ನೀವು ಖಾಲಿ ಚೆಕ್ ನ್ನು ಇಟ್ಟುಕೊಂಡು

ಆಟವಾಡುತ್ತಿದ್ದೀರಿ ಜಯಮ್ಮ ನಿಮಗೆ ಯಾವುದೇ ಹಣ ಕೊಡುವುದು ಬಾಕಿ ಇಲ್ಲ ಬನ್ನಿ ಮಾತನಾಡೋಣ ಎಂದು ಕರೆದಾಗ ನಾನು ಇಲ್ಲ ನಾನು ಎಲ್ಲಿ ಬಂದರೂ ಇದೇ ಮಾತನ್ನು ಹೇಳುತ್ತೇನೆ ನನ್ನ ವಕೀಲರಿಗೆ ಕೇಳಿಕೊಂಡು ಬಂದಿದ್ದೇನೆ ನೀವು ಏನು ಬೇಕಾದರೂ ಮಾಡಿ ಎಂದು ಉಡಾಫೆ  ಉತ್ತರ ಕೊಟ್ಟು ಫೋನ್ ಕಟ್ ಮಾಡಿದೆ ಎನ್ನುವುದು ಸುಳ್ಳು. ನಾನು ರವಿಶಂಕರ್ ನ ಬಳಿ ಮಾತನಾಡುವಾಗ ಜಯಮ್ಮ ನಾಳೆ ತನ್ನ ತಹಿ ಒಪ್ಪದೇ ಇದ್ದರೆ ಎಂದು ವಕೀಲರು ಹೇಳಿದ್ದರಿಂದ ನಾನು ಆಕೆಯ ಬಳಿ ಹೋಗಿ ಅವರ ಹೆಬ್ಬೆಟ್ಟಿನ ಸಹಿಯನ್ನು ಕೂಡ ಪಡೆದುಕೊಂಡಿರುವ ಬಗ್ಗೆ ಒಪ್ಪಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಖಾಲಿ ಚೆಕ್ ನನ್ನ ಬಳಿ ಇರುವುದನ್ನು ಕೂಡ ಒಪ್ಪಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಇಷ್ಟೆಲ್ಲಾ ದಾಖಲೆಗಳು ನನ್ನ ಬಳಿ ಇದ್ದರೂ ಕೂಡ ಅನ್ಯಾಯದ ಪಾಯಿದೆಯನ್ನು ಪಡೆದುಕೊಳ್ಳುವ ಉದ್ದೇಶದಿಂದ ನಿಪಿ-1 ನ್ನು ಕೇಸಿಗೋಸ್ಕರ ಸೃಷ್ಟಿ ಮಾಡಿದ್ದೇನೆ ಎನ್ನುವುದು ಸುಳ್ಳು. ಆ ರೇಕಾರ್ಡ್ ನ್ನು ಕೇಳಿಸಿಕೊಂಡರೆ ಅದರಲ್ಲಿರುವ ಧ್ವನಿ ನನಗೆ ಗೊತ್ತಾಗುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನದಾಗಿದ್ದರೆ ನನಗೆ ಗೊತ್ತಾಗುತ್ತದೆ ಎಂದು ಸಾಕ್ಷಿ ಹೇಳುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಲಾಗಿದೆ ಹಾಗೂ ಕೊಡಲಾಗಿದೆ )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಅನಿತ, ಜಿ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **24-06-2023.**